**<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ</u>**

**ಫೌಜದಾರಿ ಪ್ರಕರಣ ಸಂಖ್ಯೆ: 802/2017**

**ಸರಕಾರದ ಪರವಾಗಿ ಃ ಅಬಕಾರಿ ಪೋಲೀಸ್ ಸೇಡಂ**

**//ವಿರುದ್ಧ//**

**ಆರೋಪಿ ಃ** ಮಾನುಬಾಯಿ ಗಂಡ ವಿಠ್ಠಲ ಚವ್ಹಾಣ
ವಃ 38 ವರ್ಷ, ಉಃ ಕೂಲಿ ಕೆಲಸ
ಸಾಃ ಕೊತ್ತಪಲ್ಲಿ ತಾಂಡಾ, ತಾಃ ಸೇಡಂ, ಜಿಃ ಕಲಬುರಗಿ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313ರ ಅನ್ವಯ ಆರೋಪಿಯ ಹೇಳಿಕೆ**

ಪ್ರಶ್ನೆ 1) ಅಭಿಯೋಜನೆ ಪರ ವಿಚಾರಣೆ ಮಾಡಿದ ಸಾಕ್ಷಿಗಳನ್ನು ಮನಪೂರ್ವಕವಾಗಿ ಕೇಳಿದ್ದಿರಾ ?
ಉಃ ಕೇಳಿರುತ್ತೇನೆ.

ಪ್ರಶ್ನೆ 2) ಚಾಸಾ.5/ಪ್ರಾಸಾ.1 ಮರೆಪ್ಪ ತಂದೆ ಭೀಮಪ್ಪ ನಾಟಿಕರ್, ತಮ್ಮ ಸಾಕ್ಷ್ಯದಲ್ಲಿ ದಿನಾಂಕ 11.12.2025 ರಂದು, ದಿ. 19-03-2015 ರಂದು ಮಾನು ಬಾಯಿ ಗಂಡ ವಿಠಲ್ ಚೌಹಾನ್ ಕೊತ್ತಪಲ್ಲಿ ತಾಂಡಾ ಎಂಬುವವರು ಮನೆಯಲ್ಲಿ ಕಳ್ಳಬಟ್ಟಿ ಸರಾಯಿ ಮತ್ತು ಬೆಲ್ಲದ ಕೊಳೆಯನ್ನು ಸಂಗ್ರಹಿಸಿದ್ದು ಎಂದು ಬೆಳಿಗ್ಗೆ 11-30 ಗಂಟೆಗೆ ಬಾತಿಮಿ ಬಂದಿತ್ತು, ಆಗ ಇವರು ಮತ್ತು ಸಿಬ್ಬಂದಿಯವರು ಕೆ ಎ 32 ಜಿ 477 ಹಾಗೂ ಕೆ ಎ 32 ಜಿ 482 ಮೂಲಕ ಅಬಕಾರಿ ಉಪ ಅಧೀಕ್ಷಕರು ಉಪ ವಿಭಾಗ ಚಿತ್ತಾಪುರ ಮತ್ತು ಅಬಕಾರಿ ನೀರಿಕ್ಷಕರು ಚಿಂಚೊಳ್ಳಿ ವಲಯ ಅವರ ಸಿಬ್ಬಂದಿಯವರು ಪಂಚರಿಗೆ ಕರೆಯಿಸಿ ಅವರಿಗೆ ಸದರಿ ವಿಷಯವನ್ನು ತಿಳಿಸಿ ಕಛೇರಿಯಿಂದ ಹೋರಟು 12.30 ಗಂಟೆಗೆ ಬಾತಮಿ ಬಂದ ಸ್ದಳಕ್ಕೆ ತಲುಪಿದರು, ಆ ಸಮಯದಲ್ಲಿ ವಾಹನದ ಸಪ್ಪಳ ಕೇಳಿ ಮತ್ತು ಸಮವಸ್ತ್ರದಲ್ಲಿ ಇರುವ ಅಧಿಕಾರಿಗಳನ್ನು ಗಮನಿಸಿ ಸದರಿ ಮಹಿಳೆ ಅಲ್ಲಿಂದ ಹೋಡಿ ಹೋಗಿದ್ದಳು, ಆಗ ಸಿಬ್ಬಂದಿಯವರು ಅವರಿಗೆ ಹಿಡಿಯಲು ಪ್ರಯತ್ನಿಸಿರುತ್ತಾರೆ ಆದರೆ ಅವರು ಸಿಕ್ಕಿರುವುದಿಲ್ಲ, ನಂತರ ಸದರಿ ಮನೆಯನ್ನು ತಪಾಸಣೆ ಮಾಡಲು ಸಮುಚಿತಾ ಶೋಧನಾ ಪತ್ರವನ್ನು ತಯಾರಿಸಿ ಮನೆಯನ್ನು ಶೋಧನೆ ಮಾಡಲಾಗಿ ಸದರಿ ಮನೆಯ ಮಂಚದ ಕೆಳಗೆ 5 ಲೀ. ಪ್ಲಾಸ್ಟಿಕ್ ಕ್ಯಾನ್ ಇತ್ತು ಅದರಲ್ಲಿ ಬಿಳಿಯ ನೀರಿನಂತೆ ಇರುವ ದ್ರವ ಪದಾರ್ಥ ಇತ್ತು, ಹಾಗೂ 10 ಲೀ. ಅಳತೆ ಉಳ್ಳ 8 ಪ್ಲಾಸ್ಟಿಕ್ ಕೊಡಗಳು ಕಂಡು ಬಂದಿತ್ತು, ಅದರಲ್ಲಿ ಪ್ರತಿ ಕೊಡದಲ್ಲಿ 10 ಲೀ ನಕ್ಷು ಒಟ್ಟು 80 ಲೀ ಬೆಲ್ಲದ ಕೊಳೆ ಇತ್ತು, ಅದರಲ್ಲಿ 180 ಎಂ ಎಲ್ ನ 1 ಬಾಟಲಿನಲ್ಲಿ ಸರಾಯಿ, ಮತ್ತು ಅದೇ ರೀತಿ 180 ಎಂ ಎಲ್ ನ 1 ಬಾಟಲಿನಲ್ಲಿ ಬೆಲ್ಲದ ಕೊಳೆ ರಾಸಾಯನಿಕ ಪರೀಕ್ಷೆ ಕುರಿತು ತೆಗೆದು ಉಳಿದ ಮದ್ಯವನ್ನು ಸರ್ಕಾರದ ಸಿ 477 ನಿಂದ ಸೀಲು ಮಾಡಲಾಯಿತು, ಸದರಿ ಹೋಡಿ ಹೋದ ಮಹಿಳೆಯ ಹೆಸರನ್ನು ವಿಚಾರಿಸಲಾಗಿ ಅವರ ಹೆಸರು ಮಾನು ಬಾಯಿ ಗಂಡ ವಿಠಲ್ ಚೌಹಾನ್ಎಂದು ತಿಳಿಸಿರುತ್ತಾರೆ, ಹಾಗೇ ಸದರಿ ಸ್ದಳದಲ್ಲಿಯೇ 12-30 ರಿಂದ 02-00 ಗಂಟೆಯ ವರೆಗೆ ಪಂಚನಾಮೆಯನು ತಯಾರಿಸಿ ಸ್ದಳದಲ್ಲಿ ಪಂಚರ ಸಮಕ್ಷಮ ಸಹಿಯನ್ನು ಪಡೆದುಕೊಳ್ಳಲಾಯಿತು, ತದನಂತರ 180 ಎಂ ಎಲ್ ನ 1 ಸರಾಯಿ ಬಾಟಲನ್ನು, 180 ಎಂ ಎಲ್ ನ 1 ಬೆಲ್ಲದ ಕೊಳೆ ಬಾಟಲನ್ನು ರಾಸಾಯನಿಕ ಪರಿಕ್ಷೆಗಾಗಿ ದಿ. 22-04-2015 ರಂದು ಚಾ ಸಾ 3 ರವರ ಮುಖಾಂತರ ಕಳುಹಿಸಲಾಯಿತು, ನಂತರ ಸದರಿ ಪ್ರಕರಣದಲ್ಲಿ ತನಿಖೆಯು

ಮುಗಿದಿರುವುದರಿಂದ ದಿ.05-12-2016 ರಂದು ದೋಷಾರೋಪಣಾ ಪಟ್ಟಿಯನ್ನು ಮಾನ್ಯ ಘನ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ, ಸಾಕ್ಷಿಯು ಸದರಿ ಪಂಚನಾಮೆಯನ್ನು, ಮಾದರಿ ಮುದ್ರೆ ನಮೂನೆಯನ್ನು , ಶೋದನಾ ಪತ್ರವನ್ನು , ಪ್ರ ವ ವರದಿಯನ್ನು , ರಾಸಾಯನಿಕ ಪರಿಶೀಲನೆಗಾಗಿ ಕಳುಹಿಸಿದ ರಶೀದಿಯನ್ನು, ರಾಸಾಯನಿಕ ವಿಶ್ಲೇಷಣಾ ವರದಿಯನ್ನು , ಎರಡು 180 ಎಂ ಎಲ್ ನ ಖಾಲಿ ಬಾಟಲಿಗಳನ್ನು ನೋಡಿ ಗುರುತಿಸಿರುತ್ತಾರೆ, ಎಂದು ಹೇಳುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 3) ನೀನು ಇನ್ನೇನಾದರೂ ಹೆಚ್ಚಿಗೆ ಹೇಳುವುದು ಇದೆಯೇ ?
ಉಃ

ಪ್ರಶ್ನೆ 4) ನಿನ್ನ ಪರವಾಗಿ ಯಾವುದಾದರೂ ಸಾಕ್ಷಿಗಳನ್ನು ಮಾಡಿಸುತ್ತೀಯಾ?
ಉಃ

(ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿ, ಆರೋಪಿತನ ಹೇಳಿಕೆಯನ್ನು ದಾಖಲಿಸಿಕೊಂಡು ಆತನಿಗೆ ಗೊತ್ತಿದ್ದ ಭಾಷೆಯಲ್ಲಿ ಅಭಿಯೋಜಕರ ಪರ ವಿಚಾರಣೆಯಾದ ಸಾಕ್ಷಿಗಳ ಹೇಳಿಕೆಗಳನ್ನು ಓದಿ ಹೇಳಿ ಆತನ ಹೇಳಿಕೆಯನ್ನು ಪಡೆಯಲಾಯಿತು).

ಸಹಿ/-

ದಿನಾಂಕ 18-12-2025

ಪ್ರ.ದ. ನ್ಯಾ.ದಂ. ಸೇಡಂ.